ಅಧ್ಯಕ್ಷರು: ಆಯಿತು ಕೇಳಿ.

ಕುಡಿಯುವ ನೀರಿನ ನಿರ್ವಹಣೆ ಖಾಸಗೀಕರಣ

93(639) ಶ್ರೀ ಜಯಚಂದ್ರ ಟಿ.ಬಿ (ಶಿರಾ) ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪಾಲಿಕೆ ವ್ಯಾಪ್ತಿಯಲ್ಲಿ ಕುಡಿಯುವ ನೀರು ಪೂರೈಕೆಯ ನಿರ್ವಹಣೆಯನ್ನು ಖಾಸಗೀಕರಣಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಅಥವಾ ಖಾಸಗಿಯವರಿಗೆ ನೀಡಲಾಗಿದೆಯೇ;

ಆ) ಹಾಗಿದ್ದಲ್ಲಿ, ಅಂತಹ ಕಂಪನಿಗಳು/ಸಂಸ್ಥೆಗಳು ಯಾವುವು;

ಇ) ಇದಕ್ಕೆ ವಿಧಿಸಿರುವ ಮಾರ್ಗಸೂಚಿಗಳೇನು;

ಈ) ಅಂತಹ ಖಾಸಗಿ ಕಂಪನಿಗಳು/ಸಂಸ್ಥೆಗಳು ಯಾವ ಯಾವ ಪಾಲಿಕೆಗಳಿಗೆ ಎಷ್ಟೆಷ್ಟು ಬಂಡವಾಳ ಹೂಡಿವೆ ಅಥವಾ ಹೂಡಲು ಮುಂದೆ ಬಂದಿವೆ?

ಎಸ್. ಸುರೇಶ್ ಕುಮಾರ್ (ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ, ಪೌರಾಡಳಿತ ಮತ್ತು ಸ್ಥಳೀಯ ಸಂಸ್ಥೆಗಳು ಹಾಗೂ ಬೆಂಗಳೂರು ಜಲ ಮಂಡಳಿ ಸಚಿವರು)

ಅ) ಪಾಲಿಕೆಗಳು ಕುಡಿಯುವ ನೀರಿನ ಪೂರೈಕೆಯ ನಿರ್ವಹಣೆಯನ್ನು ಖಾಸಗಿ ಸಂಸ್ಥೆಗಳ ಸಹಾಯದೊಂದಿಗೆ ಕೈಗೊಳ್ಳಲು ಪ್ರಯತ್ನಿಸಿವೆ. ಈ ಸಂಸ್ಥೆಗಳು ಸಿವಿಲ್ ಗುತ್ತಿಗೆದಾರಂತೆ ಮಹಾನಗರ ಪಾಲಿಕೆಗಳು ವಿಧಿಸುವ ಷರತ್ತು ಮತ್ತು ನಿಬಂಧನೆಗೊಳಪಟ್ಟು ಕೆಲಸ ನಿರ್ವಹಿಸಬೇಕಾಗಿರುತ್ತದೆ.

2007–08 ಸಾಲಿನಲ್ಲಿ, ಬೆಳಗಾವಿ, ಗುಲ್ಬರ್ಗಾ ಮತ್ತು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಗಳ ಆಗಿನ ಆಡಳಿತಾಧಿಕಾರಿಗಳು ಪಾಸು ಮಾಡಿದ ಠರಾವುಗಳನ್ನು ಆಧರಿಸಿ, ಬೆಳಗಾವಿ, ಗುಲ್ಬರ್ಗಾ ಮತ್ತು ಹುಬ್ಬಳ್ಳಿ–

ಧಾರವಾಡ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ 24/7 ನಿರಂತರ ನೀರು ಸರಬರಾಜನ್ನು ಸಾರ್ವಜನಿಕ–ಖಾಸಗಿ ಸಹಭಾಗಿತ್ವದಡಿಯಲ್ಲಿ ಉನ್ನತೀಕರಿಸುವ ಪ್ರಸ್ತಾವನೆಗೆ ಸರ್ಕಾರಿ ಆದೇಶ ಸಂಖ್ಯೆ: ಯುಡಿಡಿ 81 ಪಿಆರ್‌ಜೆ 2008, ದಿನಾಂಕ 6–10–2008ರಲ್ಲಿ ಅನುಮೋದನೆ ನೀಡಲಾಗಿದೆ. ಇದಲ್ಲದೆ, ಜೆ.ಎನ್.ಎನ್.ಯು. ಆರ್.ಎಮ್. ಯೋಜನೆಯಡಿ, ಮೈಸೂರು ನಗರದಲ್ಲಿ ಸಹ 24/7 ನೀರು ಸರಬರಾಜು ಯೋಜನೆಯನ್ನು ಕಾರ್ಯಾಧಾರಿತ ನಿರ್ವಹಣಾ ಗುತ್ತಿಗೆಯಡಿ ಅನುಷ್ಠಾನಗೊಳಿಸಲಾಗುತ್ತಿದೆ.

ಆ) ಬೆಳಗಾವಿ, ಗುಲ್ಬರ್ಗಾ ಮತ್ತು ಹುಬ್ಬಳ್ಳಿ–ಧಾರವಾಡ ನಗರಗಳ ಪ್ರಾತ್ಯಕ್ಷಿಕ ವಲಯಗಳಲ್ಲಿ 24/7 ನೀರು ಸರಬರಾಜಿನ ನಿರ್ವಹಣೆ ಗುತ್ತಿಗೆಯನ್ನು M/s Veolia Eau-Compagnie Generale des Eaux (France), ಯೋಜನಾ ಕಛೇರಿ, ಬೆಂಗಳೂರು ಇವರಿಗೆ ವಹಿಸಲಾಗಿದೆ. (2 ವರ್ಷಗಳ ಅವಧಿ: 1–4–2010 ರಿಂದ 31–3–2012). ಮೈಸೂರು ನಗರದಲ್ಲಿ 24/7 ನಿರಂತರ ನೀರು ಸರಬರಾಜಿಗೆ ಮತ್ತು ನಿರ್ವಹಣೆ ಕಾರ್ಯವು ಸೇರಿದಂತೆ ಗುತ್ತಿಗೆಯನ್ನು M/s Jamshedpur Utilities Services Company Limited (JUSCO) ಇವರಿಗೆ ವಹಿಸಲಾಗಿರುತ್ತದೆ.

ಇ) ಸರ್ಕಾರಿ ಅಧಿಸೂಚನೆ ಸಂಖ್ಯೆ: ಯುಡಿಡಿ 110 ಎಹೆಚ್‌ಡಿ 2004, ದಿನಾಂಕ 3–1–2005ರಲ್ಲಿ ಕರ್ನಾಟಕ ಮಹಾನಗರ ಪಾಲಿಕೆ (ನೀರು ಸರಬರಾಜು) ನಿಯಮಗಳು 2004 ಇದಕ್ಕೆ ಮಾಡಲಾದ ತಿದ್ದುಪಡಿಗಳ ಅನ್ವಯ, ಮಹಾನಗರ ಪಾಲಿಕೆಗಳು ನಿರ್ವಹಣಾಗಾರರೊಂದಿಗೆ ಮಾಡಿಕೊಳ್ಳಲಾದ ಗುತ್ತಿಗೆ ಷರತ್ತುಗಳ ಪ್ರಕಾರ ನಿರ್ವಹಣಾಗಾರರಿಗೆ ನಗರ ಪಾಲಿಕೆಯ ನೀರು ಸರಬರಾಜಿನ ಎಲ್ಲಾ ಕಾಮಗಾರಿಗಳ ನಿರ್ವಹಣೆಯಲ್ಲಿ ಭಾಗವಹಿಸಲು ಹಾಗೂ ಸಾರ್ವಜನಿಕ ಮತ್ತು ಖಾಸಗಿ ಉದ್ದೇಶಗಳಿಗಾಗಿ ನಗರದಲ್ಲಿ ಅಥವಾ ನಗರದ ನಿರ್ದಿಷ್ಟ ಭಾಗದಲ್ಲಿ ಸಾಕಷ್ಟು ನೀರು ಪೂರೈಕೆಗಾಗಿ ಹೊಸ ಕಾಮಗಾರಿಗಳನ್ನು ನಿರ್ಮಿಸಲು ಕರ್ನಾಟಕ ಮಹಾನಗರ ಪಾಲಿಕೆ ಕಾಯ್ದೆ 1976 (ಕರ್ನಾಟಕ ಕಾಯ್ದೆ 14:1977)ರ ಅನ್ವಯ ಅನುಮತಿ ನೀಡಬಹುದಾಗಿದೆ.

ಈ) ಬೆಳಗಾವಿ, ಗುಲ್ಬರ್ಗಾ ಮತ್ತು ಹುಬ್ಬಳ್ಳಿ-ಧಾರವಾಡ ನಗರ ಪಾಲಿಕೆ ವ್ಯಾಪ್ತಿಯ ಎಲ್ಲಾ ಪ್ರದೇಶಗಳಲ್ಲಿ 24/7 ನೀರು ಸರಬರಾಜನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಡಿಯಲ್ಲಿ ಉನ್ನತೀಕರಿಸುವುದಕ್ಕಾಗಿ ಸಮಾಲೋಚಕರನ್ನು ನೇಮಿಸಲಾಗಿದ್ದು, ಯೋಜನಾ ವರದಿಗಳ ತಯಾರಿಕೆ ಮತ್ತು ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಗುತ್ತಿಗೆ ವಿನ್ಯಾಸ ಕಾರ್ಯ ಪ್ರಗತಿಯಲ್ಲಿದೆ.

ಅದೇ ರೀತಿ ಕರಾವಳಿ ಪ್ರದೇಶದ ಮಂಗಳೂರು, ಪುತ್ತೂರು, ಉಡುಪಿ ಮತ್ತು ಕುಂದಾಪುರ ಪಟ್ಟಣಗಳಿಗೆ 24/7 ನೀರು ಸರಬರಾಜನ್ನು ಒದಗಿಸುವುದಕ್ಕಾಗಿ, ಸಾರ್ವಜನಿಕ ಖಾಸಗಿ ಸಹಭಾಗಿತ್ವದ ಗುತ್ತಿಗೆ ವಿನ್ಯಾಸ ಕಾರ್ಯ ಪ್ರಗತಿಯಲ್ಲಿದೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆ ಬಹಳ ಸುದೀರ್ಘವಾದ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಒಂದು clarification ಏನೆಂದರೆ ಪ್ರಶ್ನೆ ಬಿ ನಲ್ಲಿ ಈಗಾಗಲೇ 1-4-2010ರಿಂದ 31-3-2012ರವರೆಗೆ ಕೂಡ contract operation ನಲ್ಲಿದೆ, management ಗೋಸ್ಕರ entrust ಮಾಡಿದ್ದೇವೆಂಬ ಮಾತನ್ನು ಹೇಳಿದ್ದೀರಿ. ನನ್ನ ಕೊನೆ ಪ್ರಶ್ನೆಗೆ ತಾವು ಉತ್ತರವೇನು ಕೊಟ್ಟಿದ್ದೀರಿ ಎಂದರೆ private companies ಎಷ್ಟು investment ಮಾಡಿದ್ದೀರಿ ಎಂದು ಕೇಳಿದರೆ Consultants have been appointed and preparation of projects reports and ppp structuring and up scaling 24x7 water supply to cover the entire corporation areas of Belgaum, Gulbarga, Hubli and Dharwad City is in progress ಎಂದು ಹಾಕಿದ್ದೀರಿ. ಅದಕ್ಕೆ ಎಷ್ಟು ಹಣ ಪೇಮೆಂಟ್ ಆಗಿದೆ? ಎಷ್ಟು invest ಮಾಡಿದ್ದಾರೆ? ಎನ್ನುವ ವಿವರ ಬೇಕು. ಈಗಾಗಲೇ ಮಂಗಳೂರಿನಲ್ಲಿ ಪುತ್ತೂರು, ಉಡುಪಿ, ಕುಂದಾಪುರ ಕೂಡ progress ನಲ್ಲಿ ಇದೆ ಎಂದು ಹೇಳಿದ್ದೀರಿ. ಈ ರೀತಿ ನೀವು ಖಾಸಗಿಯವರಿಗೆ ವಹಿಸಿರತಕ್ಕಂಥ ಹಿನ್ನೆಲೆಯಲ್ಲಿ ನೀವು ಕಾನೂನು ಪ್ರಕಾರ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದೀರಿ. ಈಗಾಗಲೇ entrust ಮಾಡಿ operation start ಆಗಿರುವುದರಿಂದ ಆ ಕೆಲಸ ಸಮರ್ಪಕವಾಗಿ, ತೃಪ್ತಿಕರವಾಗಿ ಇದೆಯೇ? ಅವರು ಎಷ್ಟು ಬಂಡವಾಳ ಹಾಕಿದ್ದಾರೆ ಎಂಬ ವಿವರ ಬೇಕು.

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ ಸಚಿವರು): ಇದು ನಾವು ಗುತ್ತಿಗೆಗೆ ಕೊಟ್ಟಿರುವುದು. ಖಾಸಗಿಯವರು ಬಂದು ಹಣ ಹಾಕುವ ಪದ್ಧತಿ ಇಲ್ಲ. ಹುಬ್ಬಳ್ಳಿ, ಬೆಳಗಾಂ, ಗುಲ್ಬರ್ಗಾ, ಮೈಸೂರಿನಲ್ಲಿರಬಹುದು. They are nothing but contractors, ಒಂದೇನೆಂದರೆ ಅವರು execute ಮಾಡಿ ಆಮೇಲೆ ಆ two years maintenance ಕೂಡ ಮಾಡಬೇಕು. ಏಕೆಂದರೆ ಇದು ಸ್ವಲ್ಪ ವಿಶಿಷ್ಟವಾದ ಕೆಲಸವಾಗಿರುವುದರಿಂದ 24 x 7 ಕೊಡುತ್ತಿರುವುದರಿಂದ ನಮ್ಮ ಅನುಭವದಲ್ಲಿ ಅದು ಹುಬ್ಬಳ್ಳಿ, ಧಾರವಾಡ, ಬೆಳಗಾಂ, ಗುಲ್ಬರ್ಗಾ ಇರಬಹುದು. ಎಲ್ಲೆಲ್ಲಿ 24 x 7 ಕೊಟ್ಟಿದ್ದೇವೆ. ಅಲ್ಲಿ ಬಹಳ ತೃಪ್ತಿಕರವಾಗಿ ನೀರನ್ನು ಸಹ ಕೊಡುತ್ತಿದೇವೆ. ನೀರಿನ ಆ ದರ ಇವತ್ತು ಚೆನ್ನಾಗಿ ಸಂಗ್ರಹ ಆಗುತ್ತಿದೆ. ಜೊತೆಗೆ ಬಹಳ important ಅಂದರೆ ನೀರಿನ consumption ಕಡಿಮೆಯಾಗಿದೆ. ಇದು ಬಹಳ ಮುಖ್ಯ, ಏಕೆಂದರೆ ಬೆಂಗಳೂರಿನಲ್ಲಿ ನಾವು ಎರಡು ದಿವಸಗಳಿಗೊಮ್ಮೆ ನೀರು ಬರುತ್ತದೆಂದು ಸಂಗ್ರಹ ಮಾಡಿಡುತ್ತೇವೆ. ನೀರು ಬಂದ ತಕ್ಷಣ ಅದನ್ನು ಚೆಲ್ಲುತ್ತೇವೆ. ಈಗ 24 x 7 ಸಿಗುವುದರಿಂದ if the water supplies assure ಆ ರೀತಿ waste ಆಗುವುದು ಬಿಟ್ಟು consumption ಬಹಳ ಕಡಿಮೆಯಾಗಿದೆ ಮತ್ತೆ contamination ಆಗಿದೆ. ಈ ಮೂರು ಅನುಭವದ ಹಿನ್ನೆಲೆಯಲ್ಲಿ ಹುಬ್ಬಳ್ಳಿ, ಬೆಳಗಾಂ, ಗುಲ್ಬರ್ಗಾ ಇವುಗಳ ಹಿನ್ನೆಲೆಯಲ್ಲಿ ನಮ್ಮ ಮೈಸೂರು entire cityಗೆ ಅದನ್ನು 'extend ಮಾಡಬೇಕೆಂದಿದ್ದೇವೆ. ಕ್ಯಾಬಿನೆಟ್‌ನಲ್ಲಿ ನಾವೇನು demo zoneನಲ್ಲಿ ಮಾಡಿದ್ದು ಹುಬ್ಬಳ್ಳಿಯಲ್ಲಿ 4 ವಾರ್ಡ್, ಬೆಳಗಾಂ ಮತ್ತು ಗುಲ್ಬರ್ಗಾದಲ್ಲಿ ಅದನ್ನು entire cityಗೆ ಮಾಡಬೇಕೆಂದು ಅದರ ವಿನ್ಯಾಸವನ್ನು ಈಗ ತಯಾರಿಸುತ್ತಿದ್ದೇವೆ. So there is no question of their investing. ಅವರೇನು ಹಣ ತಂದು ಹಾಕುವುದು. ಖಾಸಗೀಕರಣ ಖಂಡಿತ ಅಲ್ಲ ಇದು.

ಶ್ರೀ ಟಿ.ಬಿ. ಜಯಚಂದ್ರ: ನಾವು ಭಾರಿ contract ಅನ್ನೇ ಮಾಡುವಂಥ ಸಂದರ್ಭದಲ್ಲಿ ಅದು France ನಿಂದಲೇ ಬರಬೇಕಾಗಿತ್ತೇ? ಇಲ್ಲಿ localನಲ್ಲಿ ಯಾರು ಇರಲಿಲ್ಲವೇ? ಎಂಬ ಅನುಮಾನ ಇತ್ತು.

ಶ್ರೀ ಎಸ್. ಸುರೇಶ್ ಕುಮಾರ್: They participated in the tender. ಆ ಟೆಂಡರ್‌ನಲ್ಲಿ ಅವರು select ಆಗಿ ಬರುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ: Is it an international tender?

ಶ್ರೀ ಎಸ್. ಸುರೇಶ್ ಕುಮಾರ್: No. no, it is a global tender.

ಶ್ರೀ ಆರ್. ರೋಷನ್ ಬೇಗ್: ಮಾನ್ಯ ಅಧ್ಯಕ್ಷರೇ, ನಾನು ಮಂತ್ರಿಯವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ತಾವು ಏನು ಉತ್ತರವನ್ನು ಕೊಟ್ಟಿದ್ದೀರಿ, ದಯವಿಟ್ಟು ಇದರ ಬಗ್ಗೆ ಇನ್ನೂ ಸ್ವಲ್ಪ detail ಆಗಿ ಉತ್ತರ ಕೊಡಿ. ಏನು detail ಅಂದರೆ what are the terms of Agreement? Consultancy ಯವರಿಗೆ ನೀವು ಎಷ್ಟು ಹಣ ಕೊಟ್ಟಿದ್ದೀರಿ? ಆಮೇಲೆ ಕೇವಲ ಇದನ್ನು demo ಎಂದು ಹೇಳುತ್ತಿರುವಿರಾ? ಅಥವಾ ನೀವು ನೀರನ್ನು privatize ಮಾಡುತ್ತಿರುವಿರಾ? ನಾಳೆ ಬೆಂಗಳೂರಿನಲ್ಲಿಯೂ ಸಹ privatize ಮಾಡಲಿಕ್ಕೆ ಏನಾದರೂ ಹೊರಟಿರುವಿರಾ? ಇತ್ತೀಚೆಗೆ ನಾನು ಪೇಪರ್‌ನಲ್ಲಿ ಓದಿದ್ದೇನೆ. ಯಾರೋ foreigners ಯಾವುದೋ ಒಂದು ಕಂಪನಿಯವರು ಬೆಂಗಳೂರಿಗೆ ಬಂದಿದ್ದರು, ಸುರೇಶ್ ಕುಮಾರ್ ಅವರನ್ನು ಭೇಟಿ ಮಾಡಲಿಕ್ಕೆ Officeಗೆ ಬಂದಾಗ ರೈತರೆಲ್ಲಾ demonstration ಮಾಡಿ, ಪ್ರತಿಭಟನೆ ಮಾಡಲಿಕ್ಕೆ ಬಂದಾಗ ಇವರೆಲ್ಲಾ ಬೇಡವೆಂದು ಬೇರೆ private company ಗೆ ಹೋದರು. ಅಲ್ಲಿ ಕೂಡ ಈ ಜನರೆಲ್ಲಾ ಪ್ರತಿಭಟನೆ ಮಾಡಲಿಕ್ಕೆ ಹೋದಾಗ ಅಲ್ಲಿಂದ ಪುನಃ ಈ ಬಗ್ಗೆ ಮೀಟಿಂಗ್ ಅನ್ನು ಪ್ರೈವೇಟ್ ಆಗಿ ಇನ್ನೊಂದು ಕಡೆ ಎಲ್ಲೋ ಮಾಡಿದರು ಎಂದು ಬಂದಿದೆ. ಏಕೆ? Why this ಕಸರತ್ತು? Mr. Suresh Kumar ನೀವು ಒಬ್ಬ progress Minister. ಇದರ ಬಗ್ಗೆ confusion ಆಗುವುದು ಬೇಡ. Let me complete, ಇದು privatization ಬಗ್ಗೆ ನಾನು oppose ಮಾಡುತ್ತಿಲ್ಲ. ನೀರು even in other places like London and other places, government ನೀರನ್ನು maintain ಮಾಡುವುದಿಲ್ಲ. ಆ ಕಡೆಯೆಲ್ಲಾ ಸಾಕಷ್ಟು ಕಡೆಯಲ್ಲೆಲ್ಲಾ ಇದು privatize ಆಗಿರುವುದು. ನಾನು ಹಲವಾರು ಸಾರಿ ಹೇಳುತ್ತಿದ್ದೇನೆ. ಬೆಂಗಳೂರು ನಗರದಲ್ಲಿ ಕೂಡ ಎಷ್ಟು underground leakage ಆಗುತ್ತಿದೆ. More than 45% underground leakage ಆಗುತ್ತಿದೆ. ನೀವು ಈ ಬಗ್ಗೆ ಸ್ವಲ್ಪ detail ಆಗಿ ಹೇಳಿ. ಎಷ್ಟು ಕಂಟ್ರಾಕ್ಟ್? ಎಷ್ಟು ಹಣ ಕೊಟ್ಟಿದ್ದೀರಿ? ಇನ್ನು ಮುಂದೆ ಬೆಂಗಳೂರಿನಲ್ಲಿಯೂ ಕೂಡ privatization ಮಾಡುವುದಕ್ಕೆ proposal ಇದೆಯೇ?

ಅಧ್ಯಕ್ಷರು: ಆಯಿತು, ಬಾಲಕೃಷ್ಣರವರೇ ಹೇಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ: ಮುನಿಸಿಪಾಲಿಟಿಗೆ ಸಂಬಂಧಪಟ್ಟಂಥ ಪ್ರಶ್ನೆ. ಮುನಿಸಿಪಾಲಿಟಿಯಿಂದ ನಮಗೆ ನೀರನ್ನು ನಿರ್ವಹಣೆ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ನಿಮ್ಮ ಬೋರ್ಡ್ ವತಿಯಿಂದಲೇ ಅದನ್ನು ನಿರ್ವಹಣೆ ಮಾಡಬಹುದೇ? ಎಂದು. ಮಂತ್ರಿಗಳಲ್ಲಿ ನನ್ನ ಮನವಿ. ನಿಮ್ಮ ಬೋರ್ಡ್‌ನಿಂದ ನಿರ್ವಹಣೆ ಮಾಡಿದರೆ ಬಹುಶಃ ನಮಗೆ ಹೊರೆ ಕಡಿಮೆಯಾಗುತ್ತದೆ. ಅದಕ್ಕೆ ದಯಮಾಡಿ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಸ್. ಸುರೇಶ್‌ಕುಮಾರ್: ಸಭಾಧ್ಯಕ್ಷರೆ, at the outset I want to make it very clear that ನೀರಿನ ಖಾಸಗೀಕರಣ ಮಾಡುವುದಿಲ್ಲ. ಆ ಒಂದು ಪ್ರಸ್ತಾಪ ನಮ್ಮ ಮುಂದೆ ಇಲ್ಲ. ಮೊನ್ನೆ ನೀವು ಒಂದು water trade mission ಬೆಂಗಳೂರಿಗೆ ಬಂದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೀರಿ. ಅವರು ಸರ್ಕಾರದ ಜೊತೆ, ನನ್ನೊಂದಿಗೆ ಯಾವುದೇ appointment ತೆಗೆದುಕೊಂಡಿರಲಿಲ್ಲ. ನನ್ನ ಜೊತೆ ಮೀಟಿಂಗ್ ಕೂಡ ಮಾಡಿಲ್ಲ. ಯಾವುದೋ ಒಂದು ಮಾಧ್ಯಮದಲ್ಲಿ ನೋಡಿದ್ದೀರಿ, ಅದಕ್ಕೆ ನಾನು clarification ಕೂಡ ಕೊಟ್ಟಿದ್ದೇನೆ. In fact ಅದರ ಹಿಂದಿನ ದಿವಸ ಎರಡು ದಿವಸಗಳ ಹಿಂದೆ ಈ agitators ಎಲ್ಲಾ ಕರೆದು ನಾನು ಎಲ್ಲಾ ವಿಷಯಗಳನ್ನು ಬಹಳ ವಿಷದವಾಗಿ ತಿಳಿಸಿದ್ದೇನೆ. But still that doubt is lurking. ಇದು ಏತ್ಕೆ ಆಗುತ್ತಿದೆ ಎಂದರೆ 1999ನೇ ಇಸವಿಯಿಂದ 2004ನೇ ಇಸವಿಯಲ್ಲಿ ಶ್ರೀ ಎಸ್.ಎಂ. ಕೃಷ್ಣರವರ ಸರ್ಕಾರವಿದ್ದಾಗ ಜಯಚಂದ್ರರವರು ಇಲ್ಲಿದ್ದಾಗ ಒಂದು Bangalore Water Supplyನ ಒಂದು ಫ್ರೆಂಚ್ ಕಂಪೆನಿ buy water ಕೊಡಬೇಕೆಂದು ಬಂದಿತ್ತು. ಆಗ ನಾನು ಇದೇ ಸದನದಲ್ಲಿ ಆ ಖಾಸಗೀಕರಣದ ವಿರುದ್ಧ ಹೋರಾಟ ಮಾಡಿದ್ದೆ. ಆ ಒಂದು ನಂಬಿಕೆ ಇರುವಾಗ ಖಾಸಗೀಕರಣದ ಪ್ರಶ್ನೆಯೇ ಇಲ್ಲ. ನಾನು ಅವರನ್ನು ಭೇಟಿ ಮಾಡಿಲ್ಲ. In fact ಭೇಟಿ ಆಗಬಾರದೆಂದು ಕೂಡ ನಮ್ಮವರಿಗೆ ಹೇಳಿದ್ದೇನೆ. ಇನ್ನು 40–50% leakage ಆಗುತ್ತಿದ್ದು ಅದನ್ನು ಉಳಿಸಿದರೆ ಅಷ್ಟು ನೀರು ನಮಗೆ ಲಭ್ಯವಾಗುತ್ತದೆಂದು ತಾವು ಹೇಳಿದ್ದೀರಿ. ಅದು ನೂರಕ್ಕೆ ನೂರು ಸತ್ಯ ನಾನು ಒಪ್ಪಿಕೊಳ್ಳುತ್ತೇನೆ. ಇದು 24x7 water supply ನಮ್ಮ five demonstration zones ಏನಿವೆ? ಬೆಳಗಾಂ, ಗುಲ್ಬರ್ಗಾ, ಹುಬ್ಬಳ್ಳಿ,

ಧಾರವಾಡದಲ್ಲಿ ಅದು ಒಂದು selection process ನಿಂದ that contractors have been selected. ಉದಾಹರಣೆಗೆ date of invitation of expressions interest. 16-8-2003. It is not after our coming to power. On 16-8-2003 number of firms short listed 7. ಅದೆಲ್ಲಾ ಕೂಡ ಯಾವಾಗ ಟೆಂಡರ್ ಕರೆದೆವು ಎನ್ನುವ ಇವೆ. So ಯಾವುದೇ ಕಾರಣಕ್ಕೂ ನಾವು ಅವರಿಂದ ಹಣ invest ಮಾಡಿಸಲಿಕ್ಕೆ ಹೋಗಿಲ್ಲ ಒಂದು expertise ಬೇಕು. ಆ ರೀತಿ expertise ಮಾಡಿ ವಿಶೇಷವಾಗಿ 24x7 ಮಾಡುವಾಗ ಆ leakage ಅನ್ನು detect ಮಾಡಿ almost original work ಅನ್ನು ನಾವು ಮಾಡುತ್ತಿದ್ದೇವೆ. ಹೊಸ ಪೈಪ್‌ಗಳನ್ನು ಹಾಕಿದ್ದೇವೆ. Infacr ರೋಷನ್ ಬೇಗ್‌ರವರೇ i have been to a slum in Belgaum which comes under this demo zone. ನಾನೇ particular ಆಗಿ ಕೆಲವು ಮನೆಗಳಿಗೆ ಹೋದೆ. ಅವರೆಲ್ಲರೂ ಕೂಡ paying their bill of Rs. 48.00. Because they are happly. ಅವರು ಹೇಳುವುದೇನೆಂದರೆ ನಾನು ನೀರು ಬರುತ್ತಿಲ್ಲವೆಂದು ನಾಲ್ಕು ದಿವಸ ಹೋಗದಿದ್ದರೆ 400 ರೂಪಾಯಿಗಳನ್ನು ಕಳೆದುಕೊಳ್ಳುತ್ತಿದ್ದೆ. ಇವತ್ತು water is available. So ಅದಕ್ಕೋಸ್ಕರ ಯಾವುದೇ ಖಾಸಗೀಕರಣದ ಪ್ರಶ್ನೆ ಇಲ್ಲ. ಅಗತ್ಯ ಬಿದ್ದರೆ ಮಾನ್ಯ ಸಭಾಧ್ಯಕ್ಷರೆ, ಇದರ ಬಗ್ಗೆ ವಿಸ್ತೃತವಾದ ಚರ್ಚೆಗೆ ಒಂದು ದಿನಾಂಕವನ್ನು ನಿಗದಿಪಡಿಸಿ, ಅದಕ್ಕೆ ವಿಸ್ತೃತವಾದ ವರದಿಯನ್ನು ಕೊಡುತ್ತೇನೆ. ಯಾವುದಾದರೂ ಒಂದು date fix ಮಾಡಿ.

ಅಧ್ಯಕ್ಷರು: ಆಯಿತು.

ಶ್ರೀ ಹೆಚ್.ಸಿ. ಬಾಲಕೃಷ್ಣ: ಅಧ್ಯಕ್ಷರೇ, ಮುನಿಸಿಪಾಲಿಟಿ ವತಿಯಿಂದ ನೀರು ನಿರ್ವಹಣೆ ಮಾಡಲಿಕ್ಕೆ ಆಗುತ್ತಿಲ್ಲ. ಬೋರ್ಡ್‌ನಿಂದ ನಿರ್ವಹಣೆ ಮಾಡುತ್ತಾರೆಯೇ ಎಂದು ಹೇಳಬೇಕು.

ಅಧ್ಯಕ್ಷರು: ಬೇರೆ ರೂಪದಲ್ಲಿ ಪ್ರಶ್ನೆ ತನ್ನಿ, ಅದಕ್ಕೂ ಇದಕ್ಕೂ ಏನು ಸಂಬಂಧ? ಅದನ್ನು ಪ್ರತ್ಯೇಕವಾಗಿ ಕೇಳಿ ನೀವು., ಲಾಲಾಜಿ ಮೆಂಡನ್ ಪ್ರಶ್ನೆ ಕೇಳಿ.